1 54 ಪ್ರಶ್ನೆ ಸಂ=330 (88)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ರವರು "**ಕರ್ನಾಟಕ ರಾಜ್ಯ ವಿದ್ಯುನ್ಮಾನ, ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ವತಿಯಿಂದ M/s. Edvantage Point Technologies Pvt Ltd., Bengluru ಇವರಿಗೆ ಎಷ್ಟು ಕಾಮಗಾರಿಗಳನ್ನು ವಹಿಸಲಾಗಿದೆ, ಕಾಮಗಾರಿಗಳ ವಿವರ ಹಾಗೂ ಇಲಾಖಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು. ಈ ಸಂಸ್ಥೆಯು ಯಾವಾಗ ನೊಂದಣಿಯಾಗಿದೆ ಇದರ ಮುಖ್ಯಸ್ಥರು ಯಾರು ಈ ಸಂಸ್ಥೆಯನ್ನು ನೊಂದಣಿ ಮಾಡುವಾಗ ಇಲಾಖೆಗೆ ನೀಡಲಾಗಿರುವ ದಾಖಲೆಗಳ್ಯಾವುವು ವಿವರ ಒದಗಿಸುವುದು ಹಾಗೂ ಈ ಸಂಸ್ಥೆಯು ನೋಂದಣಿಯಾದ ದಿನಾಂಕದಿಂದ ಇಲ್ಲಿಯವರೆಗೆ ನಿರ್ವಹಿಸಲಾದ ಕಾಮಗಾರಿಗಳ ವಿವರ ಹಾಗೂ ಇಲಾಖೆಯವಾರು ಪಡೆದಿರುವ ಬಿಲ್ಲಿನ ಮೊತ್ತದ ಸಂಪೂರ್ಣ ವಿವರಗಳನ್ನು ಒದಗಿಸುವಂತೆ**" 330ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಸೂಚನೆಗೆ ಮಾಹಿತಿ ಒದಗಿಸುವ ಬಗ್ಗೆ

* * * *

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್) ವತಿಯಿಂದ M/s. Edvantage Point Technologies Pvt. Ltd., Bengaluru, ಇವರಿಗೆ ಮೈಸೂರು ಮತ್ತು ಬೆಳಗಾವಿ ಕಂದಾಯ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಲ್ಲಿ ಸ್ಕೂಲ್ ಮ್ಯಾನೇಜ್ಮೆಂಟ್ ತಂತ್ರಾಂಶವನ್ನು ಅಳವಡಿಸಲು ಈ ಕೆಳಕಂಡ 3 ಕಾಮಗಾರಿಗಳನ್ನು ವಹಿಸಲಾಗಿರುತ್ತದೆ:-

1. ಕಿಯೋನಿಕ್ಸ್ ಖರೀದಿ ಆದೇಶ ಸಂಖ್ಯೆ: KSEDC/ITS/PPS/205/2023-24 ಮೊತ್ತ : ರೂ. 73,05,786/-
2. ಕಿಯೋನಿಕ್ಸ್ ಖರೀದಿ ಆದೇಶ ಸಂಖ್ಯೆ: KSEDC/ITS/PPS/232/2023-24 ಮೊತ್ತ : ರೂ. 73,62,420/-
3. ಕಿಯೋನಿಕ್ಸ್ ಖರೀದಿ ಆದೇಶ ಸಂಖ್ಯೆ: KSEDC/ITS/PPS/233/2023-24 ಮೊತ್ತ : ರೂ. 73,62,420/-

ಮೈಸೂರು ಮತ್ತು ಬೆಳಗಾವಿ ಕಂದಾಯ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ / ಕಾಲೇಜುಗಳಲ್ಲಿ ಸ್ಕೂಲ್ ಮ್ಯಾನೇಜ್ಮೆಂಟ್ ತಂತ್ರಾಂಶವನ್ನು ಅಳವಡಿಸುವ ಕಾಮಗಾರಿಯ ಕಾರ್ಯಾದೇಶವನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದವರು ದಿನಾಂಕ:09.03.2023 ರಂದು ಕಿಯೋನಿಕ್ಸ್ ಸಂಸ್ಥೆಗೆ ನೇರವಾಗಿ ನೀಡಿರುತ್ತಾರೆ.

M/s. Edvantage Point Technologies Pvt. Ltd., Bengaluru ಸಂಸ್ಥೆಯವರು ದಿನಾಂಕ: **04.11.2022** ರಂದು ಕಿಯೋನಿಕ್ಸ್ ಸಂಸ್ಥೆಯೊಂದಿಗೆ Pre-Qualified Business Associate ಆಗಿ ಕರಾರು ಒಪ್ಪಂದವನ್ನು ಮಾಡಿಕೊಂಡಿದ್ದು, ಶ್ರೀಮತಿ ಪ್ರೀತಿ ಸೇಲಿಹ ಮುವ್ವ ರವರು ಈ ಸಂಸ್ಥೆಯ ಮುಖ್ಯಸ್ಥರಾಗಿರುತ್ತಾರೆ.

M/s. Edvantage Point Technologies Pvt. Ltd., Bengaluru ಸಂಸ್ಥೆಯವರು GST & PAN ಪ್ರತಿಗಳು, ಮೂರು ವರ್ಷದ ಟರ್ನ್ ಓವರ್ ಪ್ರಮಾಣ ಪತ್ರ, ಸಂಸ್ಥೆಯ ಲಾಭ ಮತ್ತು ನಷ್ಟ ಹಾಗೂ ಬ್ಯಾಲೆನ್ಸ್ ಶೀಟ್‌ನ ಪ್ರತಿಗಳು, ಸಂಸ್ಥೆಯ ಬಾಡಿಗೆ ಕರಾರು ಒಪ್ಪಂದದ ಪತ್ರ, ಎರಡು ವರ್ಷದ Income Tax Return ಪ್ರಮಾಣ ಪತ್ರಗಳು, ಸಂಸ್ಥೆಯ Power of Attorney, Certificate of Incorporation, ಸಂಸ್ಥೆಯು ಯಾವುದೇ ಕಪ್ಪು ಪಟ್ಟಿಗೆ ಸೇರಿಲ್ಲವೆಂಬ ಧೃಡೀಕೃತ ಸ್ಟ್ಯಾಂಪ್ ಪೇಪರ್ ಪ್ರತಿ ಮತ್ತು ಸಂಸ್ಥೆಯ ವಿವರ ಹಾಗೂ ಸಂಸ್ಥೆಯ ಮೇಲೆ ಯಾವುದೇ ಕಾನೂನು ಪ್ರಕರಣ ಇರುವುದಿಲ್ಲ ಎಂದು ತಿಳಿಸಿ ದಾಖಲೆಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ನೊಂದಣಿ ಮಾಡುವ ಸಮಯದಲ್ಲಿ ಸಲ್ಲಿಸಿರುತ್ತಾರೆ.

M/s. Edvantage Point Technologies Pvt. Ltd., Bengaluru ಸಂಸ್ಥೆಯವರಿಗೆ ಕಿಯೋನಿಕ್ಸ್ ಸಂಸ್ಥೆಯಿಂದ ಇಲ್ಲಿಯವರೆಗೂ 3 ಕಾಮಗಾರಿಗಳನ್ನು ನೀಡಲಾಗಿರುತ್ತದೆ ಹಾಗೂ ಕಿಯೋನಿಕ್ಸ್ ಸಂಸ್ಥೆಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇಲಾಖೆಯವರಿಗೆ ಯಾವುದೇ ಬಿಲ್ ಗಳನ್ನು ಸಲ್ಲಿಸಿರುವುದಿಲ್ಲ.

(ಐಟಿಬಿಟಿ 135 ಎಲ್ ಸಿಎಂ 2024)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.



File No. ITBT/135/LCM/2024-SO-ITBT SEC (Computer No. 1618907)